# ದೈತ್ಯರ ಸಮ್ಮಿಲನ!

ಇದು 25 ವರ್ಷಗಳ ಹಿಂದಿನ ಕಥೆ. ನಿರ್ದೇಶಕರ ಸುಭಾಶ್ ಘಾಯ್ ಮತ್ತು ಹೀರೋ ಅಮಿತಾಭ್ ಬಚ್ಚನ್ ಜತೆಗೂಡಿ 'ದೇವಾ' ಚಿತ್ರದ ಕೆಲಸದಲ್ಲಿ ತೊಡಗಿದ್ದರು. ಕಥೆಯ ನಿರೂಪಣೆಯ ಬಗ್ಗೆ ಚಿಕ್ಕದೊಂದು ಭಿನ್ನಾಭಿಪ್ರಾಯ ಬಂತು. ಆಗಿನ್ನೂ ಅಮಿತಾಭ್ ದೊಡ್ಡ ಸೂಪರ್‌ಸ್ಟಾರ್ ಅಲ್ಲ; ಹಾಗೆಯೇ ಸುಭಾಶ್ ಘಾಯ್ ಕೂಡಾ ಸ್ಟಾರ್ ಮೇಕರ್ ಆಗಿರಲಿಲ್ಲ. ಆದರೆ ಮಾತಿಗೆ ಮಾತು ಬೆಳೆಯಿತು. ಘಾಯ್ ಸಿಟ್ಟಿನಿಂದ ಏನೋ ಅಂದರು. ಅಮಿತಾಭ್ ಟಾಟಾ ಎಂದರು.



25 ವರ್ಷಗಳಲ್ಲಿ ಬಾಲಿವುಡ್‌ನಲ್ಲಿ ನೂರಾರು ಸೂಪರ್‌ಹಿಟ್ ಚಿತ್ರಗಳು ಬಂದವು. ಹತ್ತಾರು ತಾರೆಯರು ಬಂದು ಹೋದರು. ಇಬ್ಬರೂ ತಮ್ಮದೇ ಆದ ಹಿಟ್ ಚಿತ್ರಗಳನ್ನು ನೀಡಿದರು. ಆದರೆ ಇಬ್ಬರೂ ಪರಸ್ಪರ ಮುಖ ನೋಡಲಿಲ್ಲ; ಮಾತನಾಡಲಿಲ್ಲ! ಸೃಜನಶೀಲತೆಯ ಪ್ರಶ್ನೆ ಬಂದರೆ, ಇಬ್ಬರೂ ತಮ್ಮದೇ ಆದ ತೂಕ ಹೊಂದಿದವರು. ಅಮಿತಾಭ್ ಒಬ್ಬನೇ ನಿಂತು ಚಿತ್ರವೊಂದನ್ನು ಶತದಿನೋತ್ಸವ ದಾಟಿಸಿದ್ದಿದೆ; ನಿರ್ಮಾಪಕರನ್ನು ಸ್ಟಾರ್ ಮಾಡಿದ್ದಿದೆ. ಹಾಗೆಯೇ ಸುಭಾಶ್ ಘಾಯ್ ತಮ್ಮ ನಿರ್ದೇಶನದ ಪ್ರತಿಭೆಯಿಂದಲೇ ಚಿತ್ರಗಳನ್ನು ನೂರು ದಿನ ದಾಟಿಸಿದ್ದಿದೆ; ತಾರೆಯರನ್ನು ಸೃಷ್ಟಿಸಿದ್ದಿದೆ.

ಕಳೆದ ವಾರ ಅಮಿತಾಭ್ ಬಚ್ಚನ್ ಸಣ್ಣದೊಂದು ಸರ್ಜರಿ ಮಾಡಿಸಿಕೊಂಡು, ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿ ಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದರೆ, ಸುಭಾಶ್ ಘಾಯ್ ತಣ್ಣಗೆ ಅಮಿತಾಭ್ ಮನೆಗೆ ಹೋಗಿದ್ದಾರೆ. 'ಜಲ್ಸಾ'ದ ಬಾಗಿಲು ತೆರೆದು ಅಮಿತಾಭ್ ಯಾವುದೇ ಕಹಿಯಿಲ್ಲದೆ ಸ್ವಾಗತಿಸಿದ್ದಾರೆ. '10 ನಿಮಿಷ, ಆರೋಗ್ಯ ವಿಚಾರಿಸಿಕೊಂಡು ಬರುತ್ತೇನೆ' ಎಂದು ಹೋದ ಘಾಯ್ ಸಾಹೇಬರು ಭರ್ತಿ ಒಂದು ಗಂಟೆ ಕೂತು ಮಾತನಾಡಿದ್ದಾರೆ. 25 ವರ್ಷಗಳಿಂದ ಮಾತೂ ಬಿಟ್ಟು ಕೂತಿದ್ದ ಬಾಲಿವುಡ್ ಇಬ್ಬರು ಸೂಪರ್ ತಾರೆಯರು ಹೀಗೆ ಮುಕ್ತವಾಗಿ ಮಾತನಾಡಿದ್ದನ್ನು ನೋಡಿ ಬಾಲಿವುಡ್ ಪಂಡಿತರೂ ಬೆರಗಾಗಿದ್ದಾರೆ.



ಅಮಿತಾಭ್ ಮನೆಯಿಂದ ಹೊರಬಂದ ಬಳಿಕ, 'ನಾನೂ ಅಮಿತಾಭ್‌ರ ಅಭಿಮಾನಿ. ದಿಲೀಪ್ ಕುಮಾರ್ ಬಳಿಕ ಭಾರತೀಯ ಚಿತ್ರರಂಗದ ಅತ್ಯುತ್ತಮ ನಟನೆಂದರೆ ಅಮಿತಾಭ್. ಅವರ ಜತೆಗೆ ಸಿನಿಮಾ ಮಾಡುವುದು ಬಹಳ ಖುಷಿ ಕೊಡುವ ಕೆಲಸ' ಎಂದಿದ್ದಾರೆ ಘಾಯ್. ಇಬ್ಬರೂ ಸೇರಿ ಸಿನಿಮಾ ಮಾಡುತ್ತಾರೆಯೆ? ಸದ್ಯಕ್ಕಂತೂ ಅಮಿತಾಭ್ ವಿಶ್ರಾಂತಿಯಲ್ಲಿದ್ದಾರೆ. ಬಳಿಕ ನೋಡಬೇಕು. ಬಾಲಿವುಡ್ ಹೊಸ ಕುತೂಹಲವಂತೂ ಸೃಷ್ಟಿಯಾಗಿದೆ.




# ಪಾಪ.. ಏಜೆಂಟ್!

'ಏಜೆಂಟ್ ವಿನೋದ್' ಚಿತ್ರ ಪ್ರೇಕ್ಷಕರಿಲ್ಲದೆ ಎರಡನೇ ವಾರಕ್ಕೇ ಥಂಡಾ ಹೊಡೆದಿದೆ. ಹರ್ಲಿ ಡೇವಿಡ್‌ಸನ್ ಬೈಕಿನಲ್ಲಿ ಸೈಫ್ ಮತ್ತು ಕರೀನಾ ಶರವೇಗದಲ್ಲಿ ಓಡಾಡಿದರೂ ಪ್ರೇಕ್ಷಕರನ್ನು ಇಂಪ್ರೆಸ್ ಮಾಡಲು ಸಾಧ್ಯವಾಗಿಲ್ಲ. 'ಇದು ಮೊದಲ ಭಾರತೀಯ ಬಾಂಡ್ ಫಿಲಂ' ಎಂದು ವಿಮರ್ಶಕರು ಬೆನ್ನು ತಟ್ಟಿದರೂ ಥಿಯೇಟರಿಗೆ ಪ್ರೇಕ್ಷಕರು ಬೆನ್ನು ತೋರಿಸಿದ್ದಾರೆ. ಬಲ್ಲ ಮೂಲಗಳ ಪ್ರಕಾರ, ಏಜೆಂಟ್ ವಿನೋದ್ ನಿರ್ಮಾಪಕರ ಜೇಬಿಗೆ ಸಖತ್ ಕತ್ತರಿ ಹಾಕಿದೆ. ಮೊದಲ ವಾರ ಅದು ಗಳಿಸಿದ್ದು 28 ಕೋಟಿ ರೂಪಾಯಿ ಮಾತ್ರ. ಸೋಮವಾರದಿಂದ ಮಲ್ಟಿಪ್ಲೆಕ್ಸ್‌ಗಳು ಬಿಟ್ಟರೆ ಸಣ್ಣ ನಗರಗಳಲ್ಲಿ ಒಂಟಿ ಥಿಯೇಟರ್‌ಗಳು ಖಾಲಿ ಹೊಡೆದಿವೆ.

ಆದರೆ ಚಿತ್ರತಂಡ ಈ ಮಾತನ್ನು ಒಪ್ಪುತ್ತಿಲ್ಲ. 'ನಿರ್ಮಾಣಕ್ಕೆ 50 ಕೋಟಿ ಹಾಗೂ ಪ್ರಚಾರಕ್ಕೆ 12 ಕೋಟಿ ಖರ್ಚು ಮಾಡಿದ್ದರಿಂದ ಒಟ್ಟು 62 ಕೋಟಿಗೆ ಸಿನಿಮಾ ಬಜೆಟ್ ಏರಿದೆ. ಮೊದಲ ವಾರದಲ್ಲಿ 30 ಕೋಟಿ ಬಂದಿದೆ. ಸಂಗೀತ 9 ಕೋಟಿಗೆ ಮಾರಾಟವಾಗಿದೆ. ಉಪಗ್ರಹ ಹಕ್ಕುಗಳನ್ನು 21 ಕೋಟಿಗೆ ಮಾರಾಟ ಮಾಡಿದ್ದೇವೆ. ಅಲ್ಲಿಂದಲ್ಲಿಗೆ ಸರಿ ಆಗಿದೆ' ಎನ್ನುತ್ತಾರೆ ಯುನಿಟ್‌ನವರು. ಏನಿದ್ದರೂ ಪ್ರಚಾರಕ್ಕೆ ತಕ್ಕ ಕಾಸು ಬಂದಿಲ್ಲ ಎನ್ನುವುದಂತೂ ನಿಜವೇ.

■ ಬಿಂದು